# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

## ಸಿ.ಸಿ. ನಂ. 227/2018

| | | |
|---|---|---|
| ಸಾಕ್ಷಿದಾರರ ಹೆಸರು | ಬಿ.ಎನ್ ಉದಯ್ ಕುಮಾರ್ | |
| ತಂದೆಯ ಹೆಸರು | ನಾಗೇಶ | ಪಿ .ಡಬ್ಲ್ಯೂ-2 |
| ವಯಸ್ಸು | 56 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ವಕೀಲರು | ದಿನಾಂಕಃ |
| ವಾಸಃ | ಕೆರೋಡಿ, ಸಾಗರ | 14.11.2025 |

**ಮುಖ್ಯ ವಿಚಾರಣೆಃ ಫಿರ್ಯಾದುದಾರರ ಪರ ವಕೀಲರಾದ ಶ್ರೀ ಸಿ.ಎಸ್ ರವರಿಂದಃ**

1. ಈ ಕೇಸಿನ ಆರೋಪಿತನು ಮತ್ತು ಫಿರ್ಯಾದುದಾರರು ಗೊತ್ತು. ನಾನು ಸುಮಾರು 25 ವರ್ಷಗಳಿಂದ ನಾನು ವಕೀಲ ವೃತ್ತಿಯೊಂದಿಗೆ ಪತ್ರಬರಹಗಾರನಾಗಿಯೂ ಸಹ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 03.07.2015 ರಂದು ಆರೋಪಿತನು ಮತ್ತು ಫಿರ್ಯಾದುದಾರನು ರಘು ಮತ್ತು ನಿಂಗಯ್ಯ ಎಂಬ ಸಾಕ್ಷಿದಾರರೊಂದಿಗೆ ಆನ್ ಡಿಮ್ಯಾಂಡ್ ಪ್ರೋನೋಟ್ ಅನ್ನು ಬರೆಯಿಸಲು ನನ್ನ ಬಳಿ ಬಂದಿದ್ದರು. ಆಗ ನಾನು ಸದರಿ ಪ್ರೋನೋಟ್ ಅನ್ನು ಪಕ್ಷಗಾರರು ಹೇಳಿದಂತೆ ಬರೆದಿದ್ದೇನೆ. 7,50,000/- ರೂ.ಗಳನ್ನು ಫಿರ್ಯಾದಿಯು ಆರೋಪಿತನಿಗೆ ಆ ದಿನ ನನ್ನ ಸಮಕ್ಷಮ ನಗದಾಗಿ ಕೊಟ್ಟರು. ಹಣವನ್ನು ಪಡೆದ ನಂತರ ಆರೋಪಿತನು ಪ್ರೋನೋಟ್ ಗೆ ಸಹಿಯನ್ನು ನನ್ನ ಹಾಗೂ ಸಾಕ್ಷಿದಾರರ ಸಮಕ್ಷಮ ಮಾಡಿದ್ದನು.

2. ಸದರಿ ಪ್ರೋನೋಟ್ ಅನ್ನು ನಾನು ಈಗ ನೋಡುತ್ತಿದ್ದು, ಅದನ್ನು ನಿಪಿ-7 ಎಂದು ಗುರುತಿಸಲಾಯಿತು ನಿಪಿ-7 ರಲ್ಲಿನ ಆರೋಪಿತನ ಸಹಿಯನ್ನು ಹಾಗೂ ಹೆಬ್ಬೆರಳಿನ ಗುರುತನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಆರೋಪಿತನ ಸಹಿಯನ್ನು ನಿಪಿ-7(ಎ) ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಗಿದೆ.

**ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.